(ಈ) ಕೆಲವು ಕಡೆ ವಿದ್ಯಾರ್ಥಿಗಳು ಊಟ ಮಾಡುವುದು ಒಂದು ಕಡೆ ವಾಸ್ತವ್ಯ ವಿರುವುದು ಮತ್ತೊಂದು ಕಡೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ, ವಿದ್ಯಾರ್ಥಿನಿಲಯಗಳ ದುರಸ್ತಿಗಾಗಿ ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

(ಅ) ಕೆಲವು ವಿದ್ಯಾರ್ಥಿನಿಲಯಗಳಿಗೆ ಮಾತ್ರ ತುರ್ತಾಗಿ ದುರಸ್ತಿ ಮತ್ತು ನವೀಕರಣಗೊಳಿಸುವ ಅಗತ್ಯವಿದೆ.

(ಆ) ಸರ್ಕಾರವು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಇಂತಹ ಪರಿಸ್ಥಿತಿ ಇರುವುದಿಲ್ಲ. ಸಾಕಷ್ಟು ಸ್ಥಳಾವಕಾಶ ಒಂದೇ ಕಟ್ಟಡದಲ್ಲಿ ಇಲ್ಲದೇ ಇರುವ ಕಾರಣ, ಕೆಲವು ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ ಊಟದ ವ್ಯವಸ್ಥೆ ಒಂದು ಕಡೆ, ಮತ್ತೆ ವಸತಿ ಮತ್ತೊಂದು ಕಡೆ ಒದಗಿಸಲಾಗಿದೆ. ಅಂತಹ ಖಾಸಗಿ ಸಂಸ್ಥೆಗಳಿಗೆ ಎಲ್ಲಾ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಒಂದೇ ಸ್ಥಳದಲ್ಲಿ ಆದಷ್ಟು ಬೇಗ ಒದಗಿಸುವಂತೆ ಸೂಚನೆಗಳನ್ನು ನೀಡಲಾಗಿದೆ.

(ಇ) ಸರ್ಕಾರವು ಈಗಾಗಲೇ ಹಾಲಿ ಇರುವ ವಿದ್ಯಾರ್ಥಿನಿಲಯಗಳಿಗೆ ದುರಸ್ತಿ ಮತ್ತು ನವೀಕರಣ ಕಾರ್ಯವನ್ನು ಕೈಗೊಂಡಿದೆ. ಇದಕ್ಕಾಗಿ 3.00 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ.

**ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಜನಾಂಗದವರ ಪಂಪ್ ಸೆಟ್‌ಗಳಿಗೆ ವಿದ್ಯುತ್.**

708- ಶ್ರೀ ಅಂಜನಾಮೂರ್ತಿ (ನೆಲಮಂಗಲ): ಮಾನ್ಯ ಸಮಾಜ ಕಲ್ಯಾಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ನೆಲಮಂಗಲ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನಾಂಗಕ್ಕೆ ಸೇರಿದ ನೀರಾವರಿ ಪಂಪ್ ಸೆಟ್ ಗಳೆಷ್ಟು ?

(ಆ) ಅವುಗಳಲ್ಲಿ ವಿದ್ಯುತ್ ಸೌಕರ್ಯಗಳನ್ನು ಒದಗಿಸಿರುವ ಪಂಪ್‌ಸೆಟ್‌ಗಳೆಷ್ಟು ?

(ಇ) ಆ ಜನಾಂಗಕ್ಕೆ ಸೇರಿದ ಪಂಪ್‌ಸೆಟ್‌ಗಳಿಲ್ಲವಕ್ಕೂ ವಿದ್ಯುತ್ ಸೌಕರ್ಯವನ್ನು ಒದಗಿಸಲಾಗಿದೆಯೇ ?

(ಈ) ಇಲ್ಲದಿದ್ದಲ್ಲಿ ವಿದ್ಯುತ್ ಸೌಕರ್ಯವನ್ನು ಒದಗಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

(ಅ) ನೆಲಮಂಗಲ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಕ್ಕೆ ಸೇರಿದ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ ಒಟ್ಟು 150

(ಆ) 124

(ಇ) ಇಲ್ಲ.

(ಈ) ಉಳಿದ 26 ನೀರಾವರಿ ಪಂಪ್‌ಸೆಟ್‌ಗಳ ಪೈಕಿ 8 ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸುವ ಕೆಲಸ ಕಾರ್ಯ ಪ್ರಗತಿಯಲ್ಲಿರುತ್ತದೆ. 8 ಪಂಪ್ ಸೆಟ್‌ಗಳಿಗೆ ವಿದ್ಯುತ್ ಮಂಜೂರಾಗಿರುತ್ತದೆ. 10 ನೀರಾವರಿ ಪಂಪ್‌ಸೆಟ್‌ಗಳ ವಿದ್ಯುದ್ದೀಕರಣದ ಅಂದಾಜು ವೆಚ್ಚ ತಯಾರಿಸಬೇಕಾಗಿರುತ್ತದೆ.